ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜೋನಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್ ಬೆಂಗಳೂರು-86,

# ದಿನಾಂಕ:-20-11-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./32/2021-22 ದಿನಾಂಕ:18-11-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ಜೋನಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. |
| 5. | ಶ್ರೀ ಆಕಾಶ್ | ವಾರ್ಡ್ ಸಮಿತಿ ಸದಸ್ಯರು |
| 6. | ಶ್ರೀ. ಎಚ್ ಎಂ ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು. |
| 7. | ಶ್ರೀ. ರಾಜ್‌ಗೋಪಾಲ್ | ಕಂದಾಯ ಪರೀವಿಕ್ಷಕರು. |
| 8. | ಶ್ರೀ. ಛಾಯಾಪತಿ | ಕಿರಿಯ ಆರೋಗ್ಯ ಪರೀವಿಕ್ಷಕರು.(ಪ್ರಭಾರ)ವಾರ್ಡ್-67 |
| 9. | ಶ್ರೀ. ದರ್ಶನ್ | ಮಾರ್ಷಲ್ ವಾರ್ಡ್ ಸಂಖ್ಯೆ-67. |
| 10. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರು. |
| 11. | ಶ್ರೀ.ಮಂಜುನಾಥ್ | ತೋಟಗಾರಿಕೆ ಇಲಾಖೆ ಸಿಬ್ಬಂದಿ. |
| 12. | ಶ್ರೀ. ಆನಂದ್ ಮೂರ್ತಿ | ಸಹಾಯಕ ಅಭಿಯಂತರು, ಬೆಸ್ಕಾಂ |
| 13. | ಶ್ರೀ. ಲೋಕೇಶ್ | ಪಶು ಪಾಲನ ವಿಭಾಗ |
| 14. | ಶ್ರೀ.ಪ್ರಸನ್ನ ಕುಮಾರ್ | ಪೊಲೀಸ್ ಪಿಸಿ ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 15. | ಶ್ರೀ.ಮುನಿಸ್ವಾಮಯ್ಯ | ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 16. | ಶ್ರೀ.ಪಾಂಡುರಂಗಯ್ಯ | ಸುಬ್ರಮಣ್ಯನಗರ ಪೊಲೀಸ್ ಠಾಣೆ. |
| 17. | ಶ್ರೀ. ಗಿರೀಶ್ | ಬೆಂ.ಜ.ಮಂ ಸಿಬ್ಬಂದಿ. |



ಮು.ತಿ.ನೋ.

20/11/2021

Scanned by CamScanner

| | | |
|---|---|---|
| 18. | ಶ್ರೀ. ಗುರುಮೂರ್ತಿ | ಘ.ತ್ಯಾ.ನಿ ವಾರ್ಡ್-67 ಸೂಪರ್‌ವೈಸರ್ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ನವೆಂಬರ್ ಮಾಹೆಯ ದಿ:20/11/2021 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್ ವ್ಯಾಪ್ತಿಯಲ್ಲಿರುವ ರೆಸಿಡೆಂಟ್ ವೆಲ್ ಫೇರ್ ಅಸೋಸಿಯೇಷನ್‌ಗಳು /ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ಇತರೆ ಸ್ಥಳೀಯ ಪ್ರಮುಖ ವ್ಯಕ್ತಿಗಳು/ ನಾಗರೀಕರುಗಳ ಗಮನಕ್ಕೆ ತರಬಯಸುವುದೇನೆಂದರೆ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಶಿಥಿಲಗೊಂಡ ಕಟ್ಟಡಗಳು /ಇತ್ತೀಚಿನ ಮಳೆಯಿಂದಾಗಿ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು /ಹೊಸದಾಗಿ ಕಟ್ಟಡ ನಿರ್ಮಾಣದ ಸಲುವಾಗಿ ಅಕ್ಕ ಪಕ್ಕದ ಕಟ್ಟಡಗಳ ಭದ್ರತೆ ಮತ್ತು ಸುರಕ್ಷತೆಗಳನ್ನು ಗಮನಿಸದೇ ಪಾಯ (ಈಂಣಟಜಚಿಣಬಿಟ) ದ ಅಗೆದಿರುವ ಮನೆಗಳು ಕಂಡು ಬಂದಲ್ಲಿ ಅವುಗಳ ವಿಳಾಸವನ್ನು ಕೂಡಲೇ ತಿಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಉದಯ ಶಂಕರ್<br>1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ. | ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನಲ್ಲಿ ಈ ತರಹದ ಯಾವುದೇ ಶಿಥಿಲಗೊಂಡ ಕಟ್ಟಡಗಳು ಇರವುದು ಕಂಡುಬಂದಿರುವುದಿಲ್ಲ ಕಂಡುಬಂದಲ್ಲಿ ಕೂಡಲೇ ತಮ್ಮ ಗಮನಕ್ಕೆ ತರಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಯಾವುದೇ ಶಿಥಿಲಗೊಂಡ ಕಟ್ಟಡಗಳು ಕಂಡುಬಂದಲ್ಲಿ ಕೂಡಲೇ ತಮ್ಮ ಗಮನಕ್ಕೆ ತರಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ.ಪ್ರಸನ್ನ ಕುಮಾರ್<br>ಪೊಲೀಸ್ ಪಿಸಿ ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. | ವಾರ್ಡ್‌ನಲ್ಲಿ ಇತ್ತೀಚಿಗೆ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ರಸ್ತೆಯ ಗುಂಡಿಗಳಲ್ಲಿ ನೀರು ನಿಂತು ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ ಹಾಗು ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಹಲವು ಗುಂಡಿಗಳಗಿದ್ದು ಬಹಳ ತೊಂದರೆ ಉಂಟಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಸ್ತೆಗಳಲ್ಲಿ ಗುಂಡಿಯಾಗಿರುವುದನ್ನು ಮುಂದಿನ 3 ದಿನಗಳೊಳಗೆ ಗುಂಡಿಯನ್ನು ಮುಚ್ಚಲು ಕಾಮಗಾರಿ ವಿಭಾಗದ ಸಹಾಯಕ ಅಭಿಯಂತರರಿಗೆ ಸೂಚಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು. | ವಾರ್ಡ್‌ನಲ್ಲಿ ದಿನವು ಭಾರಿ ಮಳೆ ಸುರಿಯುತ್ತಿದ್ದು ಪಾಟ್ ಹೋಲ್ ಹಾಕಲು ಹಾಟ್ ಮಿಕ್ಸ್ ಪ್ಲಾಂಟ್ ಇಂದ ಮಿಕ್ಸ್ ಕಳಿಸುತ್ತಿರುವುದಿಲ್ಲ ಕೂಡಲೇ ಗುಂಡಿಗಳಿಗೆ ಡಬ್ಲ್ಯೂ.ಎಂ.ಎಂ ಹಾಕಿ ಮುಚ್ಚಲಾಗುವುದು ತದನಂತರ ಗುಂಡಿಗಳನ್ನು ಮುಚ್ಚಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ.ಪಾಂಡುರಂಗಯ್ಯ<br>ಸುಬ್ರಮಣ್ಯನಗರ ಪೊಲೀಸ್ ಠಾಣೆ. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ ಸಿ.ಸಿ ಕ್ಯಾಮೇರಗಳು ಚಾಲ್ತಿಯಲ್ಲಿರುವುದಿಲ್ಲ ಇದರಿಂದ ಕಳತನ ಹಾಗು ಹಲವು ಪ್ರಕರಣಗಳನ್ನು ಪತ್ತೆಹಚಲು ತೊಂದರೆಯಾಗಿರುತ್ತದೆ. |



ವಿಶ್ವನಾಥ್.ಟಿ 20/11/2021 ಮು.ತಿ.ನೋ.

Scanned by CamScanner

| | |
|---|---|
| ಶ್ರೀ ಉದಯ ಶಂಕರ್<br>1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. | ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನಲ್ಲಿ ಸಿ.ಸಿ ಕ್ಯಾಮೇರಗಳು ಚಾಲ್ತಿಯಲ್ಲಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಸಿ.ಸಿ ಕ್ಯಾಮೇರಗಳನ್ನು ಅಳವಡಿಸುವ ಕಾಮಗಾರಿಯ ಕಡತವು ಟೆಂಡರ್ ಅನುಮೋದನೆ ಪ್ರಕ್ರೀಯೆಯಲ್ಲಿರುತ್ತದೆ ಟೆಂಡರ್ ಅನುಮೋದನೆಗೊಂಡ ನಂತರ ಹೊಸದಾಗಿ ಸಿ.ಸಿ ಕ್ಯಾಮೇರಗಳನ್ನು ಅಳವಡಿಸಲಾಗುವುದು ಹಾಗು ಹಳೆಯ ಕ್ಯಾಮೇರಗಳನ್ನು ನಿರ್ವಹಣೆ ಮಾಡಲಾಗವುದಾಗಿ ಮಾಹಿತಿ ನೀಡಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 6ನೇ ಮುಖ್ಯ ರಸ್ತೆಯಲ್ಲಿ ಬೆಂ.ಜ.ಮಂ ರವರು ರಸ್ತೆಯನ್ನು ಪೈಪ್ ಲೈನ್ ದೂರಸ್ತಿಗಾಗಿ ಅಗೆದ್ದಿದ್ದು ಆ ರಸ್ತೆಯಲ್ಲಿ ವಾಹನ ಸಂಚಾರ ಜಾಸ್ತಿಯಿದ್ದು ಕೂಡಲೇ ಬೆಂ.ಜ.ಮಂ ರವರು ಆ ರಸ್ತೆಯನ್ನು ತಾಂತ್ರಿವಾಗಿ ಸರಿಪಡಿಸಿ ಎಂದಿನಂತೆ ಮಾಡಬೇಕೆಂದು ತಿಳಿಸಿದರು. |
| ಶ್ರೀ. ದರ್ಶನ್<br>ಮಾರ್ಷಲ್ ವಾರ್ಡ್ ಸಂಖ್ಯೆ-67 | ವಾರ್ಡ್‌ನ ರಾಜ್‌ಕುಮಾರ್ ಒಳಾಂಗಣ ಕ್ರಿಡಾಂಗಣದ ಹಿಂಭಾಗದ ರಸ್ತೆಯಲ್ಲಿ ಅಭಾಂಡೆಂಡ್ ವಾಹನಗಳು ಬಹಳ ದಿನಗಳಿಂದ ನಿಂತಿರುತ್ತದೆ ಹಾಗು ಸಾರ್ವಜನಿಕರು ವಾಹನಗಳನ್ನು ತಂದು ನಿಲ್ಲಿಸುತ್ತಿರುತ್ತಾರೆ ಇದರಿಂದ ಸಾರ್ವಜನಿಕರು ಕಸ ತಂದು ಹಾಕುತ್ತಿರುತ್ತಾರೆ ಕಸ ತಂದು ಹಾಕುವವರನ್ನು ನಿಯಂತ್ರಿಸುವುದು ಬಹಳ ಸಮಸ್ಯೆಯಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನ ಗಣೇಶ ದೇವಾಲಯದ ರಸ್ತೆಯಲ್ಲಿ ಅಭಾಂಡೆಂಡ್ ವಾಹನಗಳು ಬಹಳ ದಿನಗಳಿಂದ ನಿಂತಿರುತ್ತದೆ ಇದರಿಂದ ಬಹಳ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ.ಪ್ರಸನ್ನ ಕುಮಾರ್<br>ಪೊಲೀಸ್ ಪಿಸಿ ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. | ವಾರ್ಡ್ ಸಮಿತಿ ಸದಸ್ಯರ ದೂರಿನ ಬಗ್ಗೆ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಅಪಾರವಾಗಿ ನಿಷೇದಿತ ಏಕ ಬಳಕೆ ಪ್ಲಾಸ್ಟಿಕ್‌ನ್ನು ಬಳಸುತ್ತಿರುವುದು ಗಮನಿಸಲಾಗಿದೆ ಅವುಗಳನ್ನು ಮುಟ್ಟುಗೋಲು ಹಾಕುವುದು ದಂಡವಿಧಿಸಲು, ಮಾರ್ಷಲ್‌ಗಳ ಸೇವೆಯನ್ನು ಪಡೆದು 12ನೇ ಅಡ್ಡ ರಸ್ತೆ ನಳಪಾಕ ಹೋಟೆಲ್ ರಸ್ತೆಯ ಪ್ಲೈಓವರ್‌ನ ಪ್ರದೇಶದಲ್ಲಿ ಸರ್ವಾಜನಿಕರು ಸುರಿಯುತ್ತಿರುವ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಗಾವಲು ಮಾಡಿ ಅಂತವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು, ಮುಂದುವರಿಯುತ್ತ ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಒಣ ತ್ಯಾಜ್ಯವನ್ನು ಅವರ ವತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲು ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಗಿದೆ, ಅಥವ ಅವರಿಗೆ ನೀಡಲಾಗಿರುವ ಕಾರ್ಯಾದೇಶ ರದ್ದು ಪಡಿಸಲು ಕ್ರಮ ಕೈಗೊಳುವುದು. |

ಪ್ರತಿಯನ್ನು

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.



ಮು.ಪು.ನೋ.

Scanned by CamScanner

12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

20/11/2021
ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned by CamScanner